ಶಿವಮೊಗ್ಗ – ಮಂಗಳೂರು ವಿದ್ಯುತ್ ವಾಹಕ ಟವರ್‌ಗಳ ರಿಪೇರಿ

2127: ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗಕ್ಕೆ ಅಂದರೆ, ಉಡುಪಿ, ಕುಂದಾಪುರ, ಕಾರ್ಕಳ ತಾಲ್ಲೂಕುಗಳಿಗೆ ವಿದ್ಯುತ್‌ನ್ನು 1958ನೇ ಇಸವಿಯಲ್ಲಿ ಹಾಕಿರುವ 110 ಕೆವಿ ಶಿವಮೊಗ್ಗ – ಮಂಗಳೂರು ವಾಹಕಗಳಲ್ಲಿ ಸರಬರಾಜು ಮಾಡಲಾಗುತ್ತಿರುವುದು ನಿಜವೇ;

ಆ) ಈ ವಿದ್ಯುತ್ ಲೈನು ಆಮೇಲೆ ಯಾವುದೇ ದುರಸ್ತಿ ಉಸ್ತುವಾರಿ ಇಲ್ಲದೇ ನಡುರಸ್ತೆಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ವಿದ್ಯುತ್ ವಾಹಕಗಳ ಟವರ್‌ಗಳು ತುಕ್ಕು ಹಿಡಿದಿರುವುದರಿಂದ ಟವರ್ ಕುಸಿದು ಬಿದ್ದು ವಿದ್ಯುತ್ ಸರಬರಾಜು ನಿಲುಗಡೆ ಆಗುವ ಭೀತಿ ಇರುವುದು ನಿಜವೆ;

ಈ) ಇದನ್ನು ಸರಿಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಹೌದು.

ಆ) ಈ ವಿದ್ಯುತ್ ಲೈನನ್ನು ಆಗತ್ಯ ಬಂದಾಗಲೆಲ್ಲಾ ದುರಸ್ತಿ ಮಾಡಲಾಗುತ್ತದೆ ಮತ್ತು ಸರಿಯಾದ ಉಸ್ತುವಾರಿಯಿಂದ ನಿರ್ವಹಣೆ ಕೆಲಸಗಳನ್ನು ಮಾಡಲಾಗುತ್ತಿದೆ.

ಇ) ನಿರ್ವಹಣೆ ಕೆಲಸಗಳನ್ನು ಮಾಡಲಾಗುತ್ತಿರುವುದರಿಂದ ಟವರ್ ಕುಸಿದು ಬಿದ್ದು ವಿದ್ಯುತ್ ಸರಬರಾಜು ನಿಲುಗಡೆ ಆಗುವ ಭೀತಿ ಇರುವುದಿಲ್ಲ.

ಈ) ತುಕ್ಕು ಹಿಡಿದಿದ್ದ ಎರಡು ಟವರ್‌ಗಳನ್ನು ಈಗಾಗಲೇ ಬದಲಾಯಿಸಲಾಗಿದೆ. ಕೆಲವು ಟವರ್‌ಗಳಲ್ಲಿ ತುಕ್ಕು ಹಿಡಿದಿರುವ ಮೇಲ್ಭಾಗದ ಕ್ರಾಸ್ ಆರ್ಮ್‌ಗಳನ್ನು ತ್ವರಿತ ಗತಿಯಲ್ಲಿ ಬದಲಾಯಿಸುವ ಕ್ರಮ ಕೈಗೊಳ್ಳಲಾಗಿದೆ.

ಗುಲ್ಬರ್ಗಾ ಜಿಲ್ಲೆಯ ಕೋಡಂಗಲ್ ರಸ್ತೆ ಹಾಗೂ ಸೇಡಂ ಹಂದರಿಕೆ ರಸ್ತೆ ದುರಸ್ತಿ

2199: ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1992–93ನೇ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆಯ ಲೋಕೋಪಯೋಗಿ ರಸ್ತೆಗಳಾದ ಗುಲ್ಬರ್ಗಾ ಕೋಡಂಗಲ್ ರಸ್ತೆ ಸೇಡಂ ಸರಹದ್ದಿನಿಂದ ಗಡಿ ಪ್ರಾಂತ್ಯದ ರೆಬ್ಬನ್ ಪಲ್ಲಿಯವರೆಗೆ ಹಾಗೂ ಸೇಡಂ ಹಂದರಿಕೆ ರಸ್ತೆಗಳ (ಕೋಡ್ಲಾ ಮಾರ್ಗವಾಗಿ) ದುರಸ್ತಿಗಾಗಿ ಮಾಡಿರುವ ವೆಚ್ಚವೆಷ್ಟು;

ಆ) ಇವುಗಳ ದುರಸ್ತಿ ಮಾಡಿದ್ದರೆ ಈಗಲೂ ಸಹ ದೊಡ್ಡ ದೊಡ್ಡ ತಗ್ಗುಗಳು ಬಿದ್ದು ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗಿಲ್ಲವೆ.

ಇ) ಗುಲ್ಬರ್ಗಾ ವಿಭಾಗದಲ್ಲಿಯ ಇಂತಹ ಹದಗಟ್ಟಿರುವ ರಸ್ತೆಗಳು ಬೇರೆಯಲ್ಲಿಯೂ ಇಲ್ಲವಲ್ಲವೇ;

ಈ) ಈ ರಸ್ತೆಗಳನ್ನು ದುರಸ್ತಿ ಮಾಡಿ ಸಂಚಾರಕ್ಕೆ ಅನುಕೂಲ ಮಾಡಿಕೊಡುವದು ಯಾವಾಗ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) 1992–93ನೇ ಸಾಲಿನಲ್ಲಿ ಗುಲ್ಬರ್ಗಾ ಕೋಡಂಗಲ್ ರಸ್ತೆ (ಸೇಡಂ ಸರಹದ್ದಿನಿಂದ ಗಡಿ ಪ್ರಾಂತದವರೆಗೆ) ಹಾಗೂ ಸೇಡಂ ಹಂದರಕಿಯ (ಕೊಡ್ಲಾ) ಮಾರ್ಗವಾಗಿ ಹೋಗುವ ರಸ್ತೆಗಳಿಗೆ ಅನುಕ್ರಮವಾಗಿ 1993 ಫೆಬ್ರವರಿ ಅಂತ್ಯದವರೆಗೆ ಮಾಡಿದ ವೆಚ್ಚ ಕ್ರಮವಾಗಿ 5,86,562 ಮತ್ತು ರು.1,48,692 ಆಗಿದೆ.

ಆ) ಈ ರಸ್ತೆಗಳ ಮೇಲೆ ಆಗಾಗ್ಗೆ ಕಂಡು ಬಂದ ತಗ್ಗುಗಳನ್ನು ಮುಚ್ಚಿ ರಸ್ತೆಯಲ್ಲಿ, ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗದಂತೆ ದುರಸ್ತಿ ಕಾರ್ಯಕೈಕೊಂಡು ಸುಸ್ಥಿತಿಯಲ್ಲಿಡಲಾಗುತ್ತಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಮೇಲೆ ತಿಳಿಸಿದ ಎರಡೂ ರಸ್ತೆಗಳ ಅಭಿವೃದ್ಧಿ ಕಾರ್ಯವನ್ನು ಹೈದ್ರಾಬಾದ್ – ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದಲ್ಲಿ ತೆಗೆದುಕೊಳ್ಳಲಾಗಿದೆ. ಈ ಕೆಲಸಗಳು ಪ್ರಗತಿಯಲ್ಲಿವೆ. ಈ ರಸ್ತೆಗಳ ಸಂಚಾರಕ್ಕೆ ಅಡಚಣೆ ಆಗದಂತೆ ನೋಡಿಕೊಳ್ಳಲಾಗುತ್ತಿದೆ.

ಗುಲ್ಬರ್ಗಾ ಜಿಲ್ಲೆಯಲ್ಲಿ ಒಡೆದು ಹೋಗುವ ಕೆರೆಗಳ ದುರಸ್ತಿ

2201: ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ನೈಜಾಮ ಕಾಲದ ಒಡೆದು ಹೋಗಿರುವ ಕೆರೆಗಳು ದುರಸ್ತಿ ಮಾಡದೇ ರೈತರಿಗೆ ಸಾವಿರಾರು ಎಕರೆ ನೀರಾವರಿಯಾಗದೇ ಹಾನಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇಂಥ ಒಡೆದು ಹೋಗಿರುವ ಕೆರೆಗಳು ಎಷ್ಟು;

ಇ) ಈ ಕೆರೆಗಳು ಒಡೆದು ಹೋಗಿರುವುದು ಯಾವಾಗ;

ಈ) ಈ ಕೆರೆಗಳ ಕೆಳಗೆ ನೀರಾವರಿಯಾಗುವ ಭೂಮಿ ಎಷ್ಟು; ಇಲ್ಲಿಯವರೆಗೆ ಇವುಗಳನ್ನು ದುರಸ್ತಿ ಮಾಡಿಲ್ಲ ಏಕೆ;

ಉ) ಈಗಲಾದರೂ ಸಹ ಈ ಕೆರೆಗಳನ್ನು ದುರಸ್ತಿ ಮಾಡಿ ರೈತರಿಗೆ ನೀರಾವರಿಗಾಗಿ ಅನುಕೂಲ ಮಾಡಿಕೊಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಒಡೆದ ಕೆರೆಗಳನ್ನು ದುರಸ್ತಿ ಮಾಡದಿರುವುದರಿಂದ ಸಾವಿರಾರು ಎಕರೆ ನೀರಾವರಿಯಾಗದೆ ಹಾನಿ ಉಂಟಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಎಂಟು.

ಇ) ನಿರ್ದಿಷ್ಟ ಮಾಹಿತಿ ಇಲ್ಲ (ಸುಮಾರು 15 ರಿಂದ 20 ವರ್ಷಗಳ ಹಿಂದೆ).

ಈ) 173.86 ಹೆಕ್ಟೇರ್. ಅನುದಾನದ ಕೊರತೆಯಿಂದ ದುರಸ್ತಿ ಆಗಿರುವುದಿಲ್ಲ.

ಉ) ಪರಿಶೀಲಿಸಲಾಗುವುದು.